1	2	3	4
	ಶಿಡ್ಲಘಟ್ಟ	289	46
	ಬಾಗೇಪಲ್ಲಿ	229	44
	ಗೌರಿಬಿದನೂರು	216	71
	ಗುಡಿಬಂಡೆ	105	13
	ಚಿಂತಾಮಣಿ	407	54
		ಒಟ್ಟು	**537**
26.	**ಹಾವೇರಿ ಜಿಲ್ಲೆ**		
	ಹಾವೇರಿ	88	40
	ರಾಣೆಬೆನ್ನೂರು	103	37
	ಬ್ಯಾಡಗಿ	66	26
	ಹಿರೇಕೆರೂರ	128	43
	ಸವಣೂರ	64	3
	ಶಿಗ್ಗಾಂವ್	91	44
	ಹಾನಗಲ್	152	149
		ಒಟ್ಟು	**342**
27.	**ಉಡುಪಿ ಜಿಲ್ಲೆ**		
	ಕುಂದಾಪುರ	101	88
	ಉಡುಪಿ	115	89
	ಕಾರ್ಕಳ	51	45
		ಒಟ್ಟು	**222**

4798(4679) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ರಾಜ್ಯ ಸರ್ಕಾರ ಭೂ ನೋಂದಣಿ ಬಗ್ಗೆ ಆದೇಶ ಹೊರಡಿಸಿದ್ದರಿಂದ ರಾಜ್ಯದಲ್ಲಿ ನೋಂದಣಿ ಸ್ಥಗಿತ ಗೊಂಡಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಇದರಿಂದ ಸರ್ಕಾರಕ್ಕೆ ಆಗಿರುವ ನಷ್ಟವೆಷ್ಟು?

ಆ) ಈ ರೀತಿಯ ಅಧಿಸೂಚನೆ ಹೊರಡಿಸಲು ಕಾರಣವೇನು?

ಇ) ಇದನ್ನು ಬದಲಾಯಿಸುವ ವಿಚಾರವೇನಾದರೂ ಸರ್ಕಾರ ಹೊಂದಿದೆಯೇ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು):

ಅ) ಭೂ ಪರಿವರ್ತನೆಯಾಗದ ಮತ್ತು ನಗರ ಯೋಜನಾ ಪ್ರಾಧಿಕಾರಿಗಳಿಂದ ಅಥವಾ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಕ್ಷೆ ಅನುಮೋದಿಸದ ಬಡಾವಣೆ ಮತ್ತು ಸದರಿ ಪ್ರಾಧಿಕಾರಿಗಳಿಂದ ಪಡೆದ ಬಿಡುಗಡೆ ಪತ್ರ ಪಡೆಯದ ನಿವೇಶನ ಮತ್ತು ಮನೆಗಳನ್ನು Opposed to public policy ದಿನಾಂಕ: 23-04-2005 ರಿಂದ ಅಧಿಸೂಚನೆ ಹೊರಡಿಸಿ ನೋಂದಣಿಯನ್ನು ನಿಲ್ಲಿಸಿದೆ.

2004-05 ನೇ ಸಾಲಿನಲ್ಲಿ ಮೇ 2004ರಲ್ಲಿ 118.87 ಕೋಟಿ ರೂ.ಗಳು ಮತ್ತು ಜೂನ್ 2004ರಲ್ಲಿ 170.42 ಕೋಟಿ ರೂ.ಗಳು ಸಂಗ್ರಹವಾಗಿರುತ್ತದೆ. ಇದರ ತುಲನೆಯಲ್ಲಿ ಮೇ 2005 ರಲ್ಲಿ 120.77 ಕೋಟಿ ರೂ.ಗಳು ಹಾಗೂ ಜೂನ್ 2005ರಲ್ಲಿ 139.61 ಕೋಟಿ ರೂ.ಗಳು ಸಂಗ್ರಹವಾಗಿರುತ್ತದೆ.

ಆ) ನಗರ ಪ್ರದೇಶಗಳ ವ್ಯವಸ್ಥಿತ ಬೆಳವಣಿಗೆ ದೃಷ್ಟಿಯಿಂದ ಈ ಅಧಿಸೂಚನೆ ಹೊರಡಿಸಲಾಗಿದೆ.

ಇ) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ. 13 ಎಲ್.ಜಿ.ಬಿ2005, ದಿನಾಂಕ: 02-07-2005 ರಲ್ಲಿ ಭೂ ಪರಿವರ್ತನೆಗೆ ಸಂಬಂಧಿಸಿದಂತೆ ವಿಸ್ತೃತ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. ನೋಂದಣಿ ನಿರ್ಬಂಧದಿಂದ ಕೆಲವು ರೀತಿಯ ತೊಂದರೆಗಳು ಉಂಟಾಗಿದ್ದು ಅವುಗಳನ್ನು ಸೂಕ್ತವಾಗಿ ಪರಿಹರಿಸಲು ಕಂದಾಯ ಹಾಗೂ ನಗರಾಭಿವೃದ್ಧಿ ಇಲಾಖೆಗಳ ಜಂಟಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಈಗಾಗಲೇ 3 ಬಾರಿ ದೀರ್ಘಕಾಲ ಸಭೆ ನಡೆಸಿ ಸಂಬಂಧಿಸಿದ ಸಮಸ್ಯೆಗಳನ್ನು ಕೂಲಂಕುಷವಾಗಿ ಚರ್ಚಿಸಿದೆ ಹಾಗೂ ಸಮಸ್ಯೆಗಳಿಗೆ ಪರಿಹಾರ ರೂಪದಲ್ಲಿ ಕೆಲವೊಂದು ಸೂಕ್ತ ಮಾರ್ಗದರ್ಶನ, ನಿರ್ದೇಶನ ಹಾಗೂ ಯೋಜನೆಗಳನ್ನು ರೂಪಿಸಲಾಗಿದೆ.